ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಹೇಳುವುದರಲ್ಲಿ ನಿಜವಾಗಿಯೂ ಬಹಳ ಜ್ವಲಂತ ಸಮಸ್ಯೆ ಇದೆ. ನಾನುಹೇಳಿದಹಾಗೆ ನೋಟಿಫಿಕೇಷನ್ ಮಾಡಿರುತ್ತೇವೆ. ಅದರ ಬಗ್ಗೆ ಈಗ ಅಲ್ಲಿ ಕೌನ್ಸಿಲ್ ಇದ್ದಾಗ ಆಬ್ಜೆಕ್ಷನ್ಸ್ ಬಂದಿದೆ. ಈಗ ಕೌನ್ಸಿಲ್ ಹೋಗಿ ಆಡ್ಮಿನಿಸ್ಟ್ರೇಟರ್ ಬಂದಿದ್ದಾರೆ. ಆದರೂ ಸಹ ಅದಷ್ಟು ಬೇಗ ಇದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ.

ನಜೀರ್ ಆವಾಸ್ ಯೋಜನೆಗೆ ಹಣ

೨೦೯ (೮೫೯) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ) — ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ನಜೀರ್ ಆವಾಸ್ ಯೋಜನೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗಿರುವ ಹಣವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ಈ ಯೋಜನೆಗೆ ವರ್ಗಾಯಿಸಿರುವುದು ನಿಜವೇ ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು). ಅ) ತಖ್ತೆ ೧ ಲಗತ್ತಿಸಿದೆ

ಆ) ಇಲ್ಲಾ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಣವನ್ನು ೫೦ : ೫೦ರ ಪ್ರಮಾಣದಲ್ಲಿ ಒದಗಿಸುತ್ತದೆ.

ನಜೀರ್ ಆವಾಸ್ ಯೋಜನೆಯಲ್ಲಿ ಜಿಲ್ಲಾವಾರು ಬಿಡುಗಡೆಯಾದ ಹಣ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಡಿಯಲ್ಲಿ (ಲಕ್ಷ ರೂ. ಗಳಲ್ಲಿ)

ಕ್ರಮ ಸಂಖ್ಯೆ	ವಿಭಾಗ	ದಿನಾಂಕ ೧೭–೨–೮೯ ರಂದು ಬಿಡುಗಡೆ ಮಾಡಿದ್ದು	ಶೇ. ೨೫ರ ರಾ. ಉ. ಯೋಜನೆಯ ಆನುದಾನವನ್ನು ದಿನಾಂಕ ೩೦–೪–೮೮, ೧೧–೭–೮೮ ಮತ್ತು ೧೨–೧೦–೮೮ ಈ ರೀತಿ ಬಿಡುಗಡೆ ಮಾಡಿರುತ್ತದೆ.
೧)	ಬೆಂಗಳೂರು (ನ)	೧೦.೦೦೦	೯,೬೫೫
೨)	ಬೆಂಗಳೂರು (ಗ್ರಾ)	೪೦.೦೦೦	೨೮.೮೭೨
೩)	ಕೋಲಾರ	೫೦.೦೦೦	೩೭.೩೫೦
೪)	ತುಮಕೂರು	೪೫,೧೦೦	೩೪.೦೨೪
೫)	ಚಿತ್ರದುರ್ಗ	೪೦.೦೦೦	೩೧.೮೦೪
೬)	ಶಿವಮೊಗ್ಗ	೩೫.೦೦೦	೨೬.೭೮೮
	ಒಟ್ಟು ಮೊತ್ತ–೧	೨೨೦.೦೦೦	೧೬೮.೪೫೦
೭)	ಮೈಸೂರು	೩೦.೦೦೦	೪೧.೮೯೦
೮)	ಮಂಡ್ಯ	೩೦.೦೦೦	೨೨.೪೯೨
೯)	ಹಾಸನ	೨೫.೦೦೦	೧೯.೭೬೬
೧೦)	ಚಿಕ್ಕಮಗಳೂರು	೧೦.೦೦೦	೧೫ ೧೬೮
೧೧)	ಕೊಡಗು	೧೦,೦೦೦	೧೫.೧೬೮
೧೨)	ದಕ್ಷಿಣ ಕನ್ನಡ	೩೦.೦೦೦	೨೫.೫೦೫
	ಒಟ್ಟು ಮೊತ್ತ–೧೧	೧೪೫-೦೦೦	೧೩೧.೯೨೮

1	2	3	4
೧೩)	ಬೆಳಗಾಂ	೫೦.೦೦೦	೩೯.೧೨೫
೧೪)	ಬಿಜಾಪುರ	೪೫.೦೦೦	೩೩.೧೨೪
೧೫)	ಧಾರವಾಡ	೩೦.೦೦೦	೩೭.೨೪೪
೧೬)	ಉತ್ತರ ಕನ್ನಡ	೫.೦೦೦	೯.೬೪೪
	ಮೊತ್ತ–೧೧೧	೧೩೦.೦೦೦	೧೧೯.೧೩೬
೧೭)	ಗುಲ್ಬರ್ಗ	೪೫.೦೦೦	೩೫.೯೭೨
೧೮)	ರಾಯಚೂರು	೩೦.೦೦೦	೭೪.೯೫೪
೧೯)	ಬಳ್ಳಾರಿ	೩೦.೦೦೦	೨೫.೫೫೫
೨೦)	ಬೀದರ್	೧೫.೦೦೦	೧೭.೭೫೫
	ಮೊತ್ತ–೪	೧೨೦.೦೦೦	೧೦೮.೪೪೫
	ಒಟ್ಟು ಮೊತ್ತ	೬೧೫.೦೦೦	೫೨೮.೦೦೦

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ ಹಿನ್ನೆಲೆಯನ್ನು ನಾನು ತಮ್ಮ ಮೂಲಕ ಹೇಳುತ್ತೇನೆ. ತಾವು ಒಬ್ಬರೆ ಹೆಸರಿನಲ್ಲಿ ಕಾರ್ಯಕ್ರಮ ಮಾಡುತ್ತಿದ್ದೀರಿ. ಆವರು ಈ ರಾಜ್ಯಕ್ಕೆ ಒಳ್ಳೆಯ ಕೆಲಸ ಮಾಡಿದ್ದಾರೆ, ಒಳ್ಳೆಯ ಕಾನೂನನ್ನು ತಂದಿದ್ದಾರೆ ಎಂಬ ಭಾವನೆ ಇಟ್ಟುಕೊಂಡು, ಆವರಿಗೆ ಮಾನ ಮರ್ಯಾದೆ ಕೊಡಬೇಕೆಂಬ ಹಿನ್ನೆಲೆಯಲ್ಲಿ ಇದನ್ನು ತಾವು ಮಾಡುತ್ತಿದ್ದೀರಿ, ಕೇಂದ್ರ ಸರಕಾರದಿಂದ ಬಂದಿರುವಂತಹ ಹಣವನ್ನು ಇದಕ್ಕೆ ಉಪಯೋಗ ಮಾಡುತ್ತಿದ್ದೀರಿ ಎಂದು ಹೇಳಿದ್ದೀರಿ. ಆದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಯಿಂದ ಈ ಒಂದು ಕೆಲಸ ಮಾಡತಕ್ಕಂಥ ಕಾರ್ಯಕ್ರಮವನ್ನು ತಾವು ತೆಗೆದುಕೊಂಡಿದ್ದೀರಿ. ಕೇಂದ್ರ ಸರ್ಕಾರದಿಂದ ಬಂದ ಹಣವನ್ನು, ಈ ಯೋಜನೆಗೆ ಪರ್ಗಾಪಣೆ ಮಾಡಿದರೆ ಕೇಂದ್ರ ಸರಕಾರ ಇದಕ್ಕೆ ಒಪ್ಪಿಗೆ ಕೊಡದಿದ್ದರೆ ಏನು ಮಾಡುತ್ತೀರಿ ?

ಶ್ರೀ. ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೇಂದ್ರ ಸರಕಾರದ ಹಣ ಎಂದರೆ ಶೇಕಡಾ ೫೦ ನಿವ್ವತ್ತಿ ಪ್ರಮಾಣದಲ್ಲಿ ಇರುತ್ತದೆ. ರಾಜ್ಯ ಸರಕಾರದ್ದು ಶೇಕಡಾ ೫೦ ರಷ್ಟು ಇರುತ್ತದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಕೇಂದ್ರದವರು ಏನು ಮಾರ್ಗಸೂಚಿಗಳನ್ನು ಕೊಟ್ಟಿದ್ದಾರೆ, ಆ ಮಾರ್ಗಸೂಚಿಯ ವ್ಯಾಪ್ತಿಗನುಗುಣವಾಗಿ ಈ ನಜೀರ್ ಅವಾಸ್ ಮನೆಗಳನ್ನು ಕಟ್ಟಿಸುತ್ತೇವೆ. ಕೇಂದ್ರ ಸರಕಾರದವರು ಆಕ್ಷೇಪಣೆ ಮಾಡತಕ್ಕಂಥ ವಿಷಯ ಇದರಲ್ಲಿ ಯಾವುದೂ ಇಲ್ಲ. ಈ ಕಾರಣಕ್ಕಾಗಿ ಎರಡನೇ ಪ್ರಶ್ನೆಗೆ "ಇಲ್ಲ" ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ರಾಜ್ಯ ಸರಕಾರ ಮಾಡತಕ್ಕ ಕಾರ್ಯಕ್ರಮ ಅಲ್ಲಿಂದ ಬಂದ ಹಣವನ್ನು ನಜೀರ್ ಅವಾಸ್‌ಗೆ ಪರ್ಗಾಪಣೆ ಮಾಡುತ್ತೇವೆ ಹೇಳುತ್ತಿದ್ದೀರಿ. ನಾಳೆ ಏನಾದರೂ ಈ ತರಹ ಕಾರ್ಯಕ್ರಮ ಮಾಡುತ್ತಿದ್ದೀರಿ, ಇದು ಸರಿಯಲ್ಲ ಎಂದು ಕೇಂದ್ರದವರು ಹೇಳಿದರೆ ಏನು ಮಾಡುತ್ತೀರಿ ? ನಮ್ಮ ಕಡೆಯಿಂದ ಬರವಣಿಗೆಯ ಮೂಲಕ ಒಪ್ಪಿಗೆ ತೆಗೆದುಕೊಂಡಿದ್ದೀರಾ ಎಂದರೆ ಏನು ಮಾಡುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಗೊಂದಲದಲ್ಲಿರಬಹುದು. ನಜೀರ್ ಸಾಬ್‌ರವರಹೆಸರಿನಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಅವರ ಆಕ್ಷೇಪಣೆ ಏನೂ ಇಲ್ಲ. ಕೇಂದ್ರ ಸರಕಾರ ಆಕ್ಷೇಪಣೆ ಮಾಡಬಹುದೆಂದು ಆವರ ಶಂಕೆ. ಆದರೆ ಈ ಯೋಜನೆಯಲ್ಲಿ ಶೇಕಡಾ ೫೦ ರಷ್ಟು ಹಣ ರಾಜ್ಯ ಸರಕಾರದ್ದು ಸಹ ಇರುತ್ತದೆ. ಇದರಲ್ಲಿ ನಮ್ಮ ಹಣ ಶೇಕಡಾ ೫೦ ರಷ್ಟು ಮತ್ತು ಕೇಂದ್ರ ಸರಕಾರದ ಹಣ ಶೇಕಡಾ ೫೦ ರಷ್ಟು ಇರುತ್ತದೆ. ಕೇಂದ್ರ ಸರಕಾರದವರು ಕಳುಹಿಸಿರತಕ್ಕ ಮಾರ್ಗ ಸೂಚಿಯ ಕೆಳಗೆ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ರಾಜ್ಯ ಸರಕಾರಕ್ಕೆ ಸಂಪೂರ್ಣ ಅಧಿಕಾರ ಇದೆ. ಆ ಅಧಿಕಾರ ವ್ಯಾಪ್ತಿಯಲ್ಲಿ ನಜೀರ್ ಅವಾಸ್ ಮನೆಗಳನ್ನು ರೂಪಿ

ಸಿದ್ದೇವೆ. ಆದ್ದರಿಂದ ಕೇಂದ್ರ ಸರಕಾರ ಇದರ ಬಗ್ಗೆ ಆಕ್ಷೇಪಣೆ ಮಾಡತಕ್ಕ ಪ್ರಶ್ನೆಯೇ ಉದ್ಭವ ವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೇ, ತಾವು ಒಳ್ಳೆಯ ಅಭಿಪ್ರಾಯ ಇಟ್ಟು ದಿವಂಗತ ಶ್ರೀಮಾನ್ ನಜೀರ್ ಸಾಬರ ಹೆಸರನ್ನು ಇದಕ್ಕೆ ಇಟ್ಟಿದ್ದೀರಿ. ಇದರ ಬಗ್ಗೆ ಯಾರದ್ದೂ ಆಕ್ಷೇಪಣೆ ಇಲ್ಲ ಅವರ ಹೆಸರನ್ನು ಇಡಿ. ಇದರ ಬಗ್ಗೆ ಎಲ್ಲರದ್ದೂ ಒಟ್ಟಾರೆ ಅಭಿಪ್ರಾಯ ಚೆನ್ನಾಗಿದೆ. ಅದರ ಬಗ್ಗೆ ಪ್ರಶ್ನೆ ಇಲ್ಲ. ಕೇಂದ್ರ ಸರಕಾರ ಕಳುಹಿಸಿಕೊಟ್ಟಿರುವ ಸೂಚನೆಯ ವ್ಯಾಪ್ತಿಯ ಚೌಕಟ್ಟಿನೊಳಗೆ ಇದನ್ನು ರೂಪಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಇದೆ ಎಂದು ಹೇಳಿದ್ದೀರಿ. ಇವತ್ತು ನಜೀರ್ ಆವಾಸ್ ಯೋಜನೆ ಎನ್ನತಕ್ಕಂಥಾದ್ದು ರಾಜ್ಯ ಸರಕಾರದ ಯೋಜನೆ, ಇದಕ್ಕೆ ರಾಜ್ಯ ಸರಕಾರದ ಬೊಕ್ಕಸದಿಂದ ಪ್ರತ್ಯೇಕವಾಗಿ ಹಣ ಇಟ್ಟಿದ್ದರೆ ಇದೊಂದು ಪ್ರತ್ಯೇಕ ಯೋಜನೆ ಆಗುತ್ತಿತ್ತು. ಕೇಂದ್ರ ಸರಕಾರದ ಶೇಕಡಾ ೫೦ ರಷ್ಟು ಹಣ ಮತ್ತು ರಾಜ್ಯ ಸರಕಾರದ ಶೇಕಡಾ ೫೦ ರಷ್ಟು ಹಣ ಇರತಕ್ಕಂಥ ರಾಷ್ಟ್ರೀಯ ಕಾರ್ಯಕ್ರಮವಾದ ಈ ಯೋಜನೆ ಅಡಿಯಲ್ಲಿ ಹಣವನ್ನು ಈ ಮನೆ ಕಟ್ಟುವುದಕ್ಕೆ ಹಾಕದೇ, ಪ್ರತ್ಯೇಕವಾಗಿ ಬೇರೆ ಹಣವನ್ನು ಇದಕ್ಕೆ ಹಾಕಬೇಕೆಂಬ ವಿಚಾರಕ್ಕಾಗಿ ಅವರು ಇದನ್ನು ಹೇಳುತಿದ್ದಾರೆ.

ಕೇಂದ್ರದ ಹಣವನ್ನು ತೆಗೆದುಕೊಂಡು ಹೋಗಿ ಅದಕ್ಕೆ ಹಾಕಿದರೆ ನಾಳೆ ಪ್ಲಾನಿಂಗ್ ಕಮಿಷನ್ ನವರು ಆಬ್ಜಕ್ಷನ್ ಮಾಡಬಹುದು. ಅದು ನಮ್ಮ ಯೋಚನೆ. ಇದಕ್ಕೆ ಯಾರ ಹೆಸರು ಇಟ್ಟರೂ ಸಹ ತಾವು ಬಡವರಿಗೆ ಮನೆ ಕಟ್ಟಿಸಿಕೊಟ್ಟರೆ ಸಾಕು ನಿಮಗೆ ತೊಂದರೆ ಬರದಿದ್ದರೆ ಸಾಕು. ಈ ಯೋಜನೆ ಬಗ್ಗೆ ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥ ಮಾರ್ಗ ಸೂಚಿಯಂತೆ ನೀವು ಮನೆ ಕಟ್ಟಲು ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದ ಶೇರು ೫೦ ಪರ್ಸೆಂಟ್ ಇಲ್ಲಿ ಇದೆ. ತಾವು ಇದನ್ನು ದಯವಮಾಡಿ ಈ ಸದನದಗಮನಕ್ಕೆ ತನ್ನಿ. ಈ ಸದನ ಒಪ್ಪಿದರೆ ಆಗ ಆಗಬಹುದು. ನೀವು ಬೇರೆಬೇರೆ ಹೆಸರು ಇಟ್ಟು ಆ ಹಣವನ್ನು ಖರ್ಚು ಮಾಡಬಹುದು. ಇಲ್ಲದಿದ್ದರೆ ತೊಂದರೆ ಆಗಬಹುದು ಎನ್ನುವುದು ನಮ್ಮ ಸಂಶಯ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಈಗ ಕೇಂದ್ರ ಸರ್ಕಾರದವರು ಎನ್. ಆರ್. ಇ. ಪಿ. ಆರ್. ಎಲ್. ಇ. ಜಿ. ಪಿ. ಕಾರ್ಯಕ್ರಮವನ್ನು ರೂಪಿಸತಕ್ಕಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಅಧಿಕಾರ ಕೂಡ ಅದರಲ್ಲಿರುತ್ತದೆ. ಈಗ ನಜೀರ್ ಆವಾಸ್ ಯೋಜನೆ ಬಗ್ಗೆ ಒಂದು ಉದಾಹರಣೆಗೆ ಹೇಳುವುದಾದರೆ ಕೇಂದ್ರ ಸರ್ಕಾರ ಶೇಕಡಾ ನೂರರಷ್ಟು ಹಣವನ್ನು ಆರ್. ಎಲ್. ಜಿ. ಪಿ. ಗೆ ಕೊಡುತ್ತಾರೆ. ಆದರೂ ಸಹ ಅದರಲ್ಲಿ ರಾಜ್ಯ ಸರ್ಕಾರದ ಪಾಲು ಇದೆ. ಕೇಂದ್ರ ಸರ್ಕಾರದವರು ಇಂದಿರಾ ಆವಾಸ್ ಎನ್ನತಕ್ಕಂಥ ಹೆಸರು ಇಟ್ಟು ಎಲ್ಲಾ ಒಂದು ನಿರ್ದಿಷ್ಟವಾದ ಮಾರ್ಗ ಸೂಚಿಯಲ್ಲಿ ಉದ್ಯೋಗ ದೃಢೀಕರಣ ಯೋಜನೆ ಅಡಿಯಲ್ಲಿ ಮನೆಗಳನ್ನು ಕಟ್ಟಿಕೊಡಬೇಕೆಂದು ಹೇಳಿದ್ದರು. ಅದನ್ನು ಅನುಷ್ಠಾನಗೊಳಿಸುವವರು ರಾಜ್ಯ ಸರ್ಕಾರದವರು. ಆದರಂತೆ ನಾವು ಸಹ ಇಲ್ಲಿ ದಿವಂಗತ ನಜೀರ್ ಸಾಬ್‌ರವರ ಹೆಸರಿನಲ್ಲಿ ನಜೀರ್ ಆವಾಸ್ ಎನ್ನತಕ್ಕಂಥ ಹೆಸರಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಈ ಬಗ್ಗೆ ಕೇಂದ್ರ ಸರ್ಕಾರದ ಆಕ್ಷೇಪಣೆಗಳು ಏನೂ ಬರುವುದಿಲ್ಲ. ಆದರ ಗುರಿ ಏನೆಂದರೆ ಹರಿಜನ ಮತ್ತು ಗಿರಿಜನರಿಗೆ ಹಾಗೂ ದುರ್ಬಲವರ್ಗದವರಿಗೆ ಮನೆಗಳನ್ನು ಕಟ್ಟಿಕೊಡಬೇಕೆನ್ನುವುದು ಅದೇ ರೀತಿಯಲ್ಲಿ ರಾಷ್ಟ್ರೀಯ ಉದ್ಯೋಗ ದೃಢೀಕರಣ ಯೋಜನೆಯಲ್ಲಿ ಗುಂಪು ಮನೆಗಳನ್ನು ಕಟ್ಟಿಕೊಡತಕ್ಕಂಥದ್ದರಲ್ಲಿ ಸಹ ರಾಜ್ಯ ಸರ್ಕಾರದ್ದು ೫೦ ಪರ್ಸೆಂಟ್ ಹಣ ಹಾಕಿ ಆ ಯೋಜನೆಯನ್ನು ಅನುಷ್ಠಾನದಲ್ಲಿ ತರುವ ಸಂಪೂರ್ಣವಾದ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇರುವುದರಿಂದ ಗುಂಪು ಮನೆಗಳನ್ನು ನಾವು ನಜೀರ್ ಆವಾಸ್ ಎಂದು ಕರೆಯುತ್ತೇವೆ. ಈ ಬಗ್ಗೆ ಕೇಂದ್ರ ಸರ್ಕಾರದ ಆಕ್ಷೇಪಣೆ ಏನೂ ಬರುವುದಿಲ್ಲ. ಅವರ ಮಾರ್ಗ ಸೂಚಿಯಲ್ಲಿಯೇ ನಾವು ಕಲಸ ಮಾಡುತ್ತಿದ್ದೇವೆ. ಆದ್ದರಿಂದ ಅವರು ಆಕ್ಷೇಪಣೆ ಮಾಡುವುದಿಲ್ಲವೆಂಬ ನಂಬಿಕೆ ನಮಗೆ ಇದೆ. ಮತ್ತು ಈ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕಳುಹಿಸಿದರೆ ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ನು ನಾನು ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ ಎನ್. ಆರ್. ಇ. ಪಿ. ಮತ್ತು ಆರ್. ಎಲ್. ಇ. ಜಿ. ಪಿ. ಯೋಜನೆಗಳಿಗೆ ಕೇಂದ್ರ ಸರ್ಕಾರದ ನಿರ್ದಿಷ್ಟವಾದ ಆದೇಶ ಇದೆ. ಎನ್. ಆರ್. ಇ. ಪಿ. ಯೋಜನೆಗೆ

ಕೇಂದ್ರ ಸರ್ಕಾರದ ಹಣ ೫೦ ಪರ್ಸೆಂಟ್ ರಾಜ್ಯ ಸರ್ಕಾರದ ಹಣ ೫೦ ಪರ್ಸೆಂಟ್ ಏನಿತ್ತು, ಅದನ್ನು ಈಗ ಕೇಂದ್ರ ಸರ್ಕಾರ ೭೫ ಪರ್ಸೆಂಟ್ ರಾಜ್ಯ ಸರ್ಕಾರದ್ದು ೨೫ ಪರ್ಸೆಂಟ್ ಎಂದು ಮಾಡಿದ್ದಾರೆ. ಈಗ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಹಣವನ್ನು ನಜೀರ್ ಅವಾಸ್ ಯೋಜನೆಗೆ ಉಪಯೋಗ ಮಾಡಿದರೆ ಅವರು ಆಕ್ಷೇಪಣೆ ಮಾಡಿದರೆ ಏನು ಮಾಡುತ್ತೀರಿ ? ತಾವು ಮಾತನಾಡುವಂತಹ ಸಂದರ್ಭದಲ್ಲಿ ತಾವು ಇಂದಿರಾ ಆವಾಸ್ ಹೋಜನೆ ಬಗ್ಗೆ ಹೇಳಿದಿರಿ. ಆಕಾರ್ಯಕ್ರಮವನ್ನು ಕೇಂದ್ರ ಸರ್ಕಾರದವರು ಜಾರಿ ಮಾಡಿದ್ದು, ಆ ಯೋಜನೆಗೆ ಕೇಂದ್ರ ಸರ್ಕಾರದವರು ವಿಶೇಷವಾಗಿ ಹಣ ರಾಜ್ಯ ಸರ್ಕಾರಗಳಿಗೆ ಕೊಟ್ಟು ಇಂಪ್ಲಿಮೆಂಟ್ ಮಾಡಿ ಎಂದು ಹೇಳಿದ್ದಾರೆ. ಅದು ಬೇರೆ. ಇದೇ ಬೇರೆ. ತಾವು ಆ ಹಣವನ್ನು ನಜೀರ್ ಅವಾಸ್ ಯೋಜನೆಗೆ ಖರ್ಚು ಮಾಡಿದರೆ ನಾಳೆ ಏನಾದರೂ ಆಕ್ಷೇಪಣೆ ಬರಬಹುದು ಎನ್ನುವ ಶಂಕೆ ನಮಗಿದೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಆ ಶಂಕೆಯನ್ನು ನಿವಾರಣೆ ಮಾಡಿದ್ದೇನೆಂದು ಭಾವಿಸಿದ್ದೇನೆ. ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮಗಳನ್ನು ರೂಪಿಸತಕ್ಕಂಥ ಅಧಿಕಾರ ನಮಗೆ ಇದೆ. ಗುಂಪು ಮನೆಗಳನ್ನು ಕಟ್ಟುವ ಯೋಜನೆಯಲ್ಲಿ ಈ ನಜೀರ್ ಅವಾಸ್ ಯೋಜನೆಯನ್ನು ಜಾರಿಗೆ ತಂದು ಕೇಂದ್ರ ಸರ್ಕಾರದ ಮಾರ್ಗ ಸೂಚಿಯಲ್ಲಿ ಆ ಗುಂಪು ಮನೆಗಳನ್ನು ಕಟ್ಟುತ್ತಿದ್ದೇವೆ. ಇದರಲ್ಲಿ ಆಕ್ಷೇಪಣೆ ಮಾಡುವಂತಾದ್ದು ಏನೂ ಇಲ್ಲ ೭೫ ಪರ್ಸೆಂಟ್ ಕೇಂದ್ರ ಸರ್ಕಾರ ಕೊಡುವುದು ೨೫ ಪರ್ಸೆಂಟ್ ರಾಜ್ಯ ಸರ್ಕಾರದ ಹಣ ಎಂದು ಮಾನ್ಯ ಸದಸ್ಯರುಹೇಳಿದರು ಅದು ಈ ವರ್ಷದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು. ಹಿಂದೆ ಆ ರೀತಿಇರಲಿಲ್ಲ.

ಜೀತ ವಿಮುಕ್ತರಿಗೆ ಪುನರ್ವಸತಿ

೫೩೧(೭೧೦) ಶ್ರೀ ಎಂ ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ —

ಅ) ಮೈಸೂರು ಜಿಲ್ಲೆಯಲ್ಲಿ ಗುರುತಿಸಲಾಗಿರುವ ಜೀತವಿಮುಕ್ತರೆಷ್ಟು ? ಎಷ್ಟು ಜನರಿಗೆ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಇನ್ನೂ ಪುನರ್ವಸತಿಗೊಳಿಸಬೇಕಾದವರೆಷ್ಟು ? ಪುನರ್ವಸತಿ ಗೊಳಿಸಲಾಗಿರುವವರಿಗೆ ನೀಡಿರುವ ಸೌಲಭ್ಯಗಳೇನು ?

ಆ) ಪಟ್ಟಿಯಲ್ಲಿದ್ದವರ ಹೆಸರಿನಲ್ಲಿ ಬೇರೆ ಯಾರದೇ ಜೀತವಿಮುಕ್ತರಲ್ಲದವರು ಸೌಲಭ್ಯ ಪಡೆದಿರುವ ಪ್ರಕರಣಗಳಿವೆಯೇ, ಇದ್ದಲ್ಲಿ ಎಷ್ಟು ಹಾಗಿದ್ದಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮವೇನು ?

ಇ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಗುರ್ತಿಸಲಾಗಿರುವ ಜೀತವಿಮುಕ್ತರೆಷ್ಟು ? ಎಷ್ಟು ಜನರನ್ನು ಪುನರ್ವಸತಿಗೊಳಿಸಲಾಗಿದೆ ? ಪಟ್ಟಿಯಲ್ಲಿ ಹೆಸರುಗಳಿದ್ದು ಸಹ ಸೌಲಭ್ಯವನ್ನು ಅವರಿಗೆ ಕೊಡದಿರಲು ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು).—

ಅ) ಗುರುತಿಸುವವರ ಸಂಖ್ಯೆ : ೨೪೩೫೫. ಪುನರ್ವಸತಿ ಕಲ್ಪಿಸುವವರ ಸಂಖ್ಯೆ : ೧೬೮೬೭ ಇನ್ನೂ ಪುನರ್ವಸತಿ ಕಲ್ಪಿಸಬೇಕಾಗಿರುವವರ ಸಂಖ್ಯೆ : ೫೪೬೭
ಪುನರ್ವಸತಿ ಕಲ್ಪಿಸಬೇಕಾಗಿರುವ ಜೀತವಿಮುಕ್ತರಿಗೆ ತಲಾ ೬೫೦೦ ರೂ. ವೆಚ್ಚದಲ್ಲಿ ಆರ್ಥಿಕ ಸ್ವತ್ತುಗಳಾದ ಕಾರು, ಮೋಕೆ, ಎಮ್ಮೆ ಮಿಶ್ರತಳಿ ಹಸು, ಎತ್ತು ಮತ್ತು ಗಾಡಿ ಒದಗಿಸುವುದರ ಮೂಲಕ ಹಾಗೂ ಸಣ್ಣ ವ್ಯಾಪಾರ, ಸೈಕಲ್ ಅಂಗಡಿ ನಡೆಸಲು ಸಹಾಯ ಮಾಡುವುದು.

ಆ) ಇವೆ ೧೧, ೯ ಪ್ರಕರಣಗಳನ್ನು ಮುಂದಿನ ಕ್ರಮಕ್ಕಾಗಿ ಪೋಲೀಸರಿಗೆ ಕಳುಹಿಸಲಾಗಿದೆ, ಇನ್ನು ೨ ಪ್ರಕರಣಗಳನ್ನು ಪೋಲಿಸರಿಗೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಗುರ್ತಿಸುವವರ ಸಂಖ್ಯೆ ; ೧೯೮೬ ಪುನರ್ವಸತಿ ಕಲ್ಪಿಸಿರುವವರ ಸಂಖ್ಯೆ ; ೧೬೨೧ ಪಟ್ಟಿಯಲ್ಲಿರತಕ್ಕ ಜೀತವಿಮುಕ್ತರನ್ನು ವಾರ್ಷಿಕ ಗುರಿಯ ಪ್ರಕಾರ ಪುನರ್ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಬಾಕಿ ಉಳಿದ ಜೀತವಿಮುಕ್ತರ ಪುನರ್ವಸತಿ ಸೌಲಭ್ಯವನ್ನು ೧೯೮೯-೯೦ ನೇ ಸಾಲಿನಲ್ಲಿ ಕಲ್ಪಿಸಲು ಉದ್ದೇಶಿಸಲಾಗಿದೆ.